ಮೇಲ್ನೋಟಕ್ಕೆ ಅಲ್ಯುಮಿನಿಯಂ ಮತ್ತು ಸ್ಟೀಲ್ ಅನ್ನೇ ಹೋಲುವ ಈ ಲೋಹದ ಒಡವೆ ಸುಮಾರು 10–15 ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ತೆರೆಮರೆಯಲ್ಲೇ ಇತ್ತು. ಕಳೆದ 10 ವರ್ಷಗಳಿಂದ ಈಚೆಗೆ ಪ್ಲಾಟಿನಂ ಆಭರಣ ಕೊಳ್ಳುವ, ಧರಿಸುವ ಮಹಿಳೆಯರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ ಎನ್ನುವುದು ಆಭರಣ ವರ್ತಕರ ಅಭಿಮತ ಕೂಡ. ಈಗೀಗ ಇದು ಪ್ರತಿಷ್ಠೆಯ ಸಂಕೇತವಾಗಿಯೂ ರೂಪುಗೊಳ್ಳುತ್ತಿದೆ.

ಚಿನ್ನ, ಬೆಳ್ಳಿ, ವಜ್ರಗಳಿಗೆ ಹೋಲಿಸಿದರೆ ಪ್ಲಾಟಿನಂ ಆಭರಣ ಫಳಫಳ ಹೊಳೆಯುವುದಿಲ್ಲ. ಕಣ್ಣು ಕುಕ್ಕುವುದಿಲ್ಲ. ನೋಟದಲ್ಲಿ ಸ್ಟೀಲ್ ಅನ್ನೇ ಹೋಲುವುದರ ಜೊತೆಗೆ ಇದರ ಬೆಲೆಯ ಬಗ್ಗೆ ಕಳ್ಳರಿಗೆ ಅರಿವಿಲ್ಲದ ಕಾರಣ ಕಳ್ಳಕಾಕರು ದೋಚುತ್ತಾರೆ ಎಂಬ ಭಯವೂ ಇಲ್ಲ. ಶ್ರೀಮಂತ ವರ್ಗದ ಮಹಿಳೆಯರಿಗೆ, ಆಧುನಿಕ ಮನೋಭಾವದವರಿಗೆ, ಫ್ಯಾಷನ್ ಬಯಸುವ ಯುವತಿಯರಿಗೆ, ಹಳದಿ ಲೋಹವನ್ನು ಇಷ್ಟಪಡದ ತರುಣಿಯರಿಗೆ ಪ್ಲಾಟಿನಂ ಹೇಳಿ ಮಾಡಿಸಿದ ಆಭರಣ. ಆದರೆ ಮಧ್ಯಮ ವರ್ಗದ ಯುವತಿಯನ್ನು ಈ ಆಭರಣ ಇನ್ನೂ ಅಷ್ಟಾಗಿ ಸೆಳೆದಿಲ್ಲ.

'ಪ್ಲಾಟಿನಂ ಭಾವನಾತ್ಮಕ ಸಂವೇದನೆಗೆ ಸೂಕ್ತವಾದ ಆಭರಣ. ಬಾಂಧವ್ಯ ಬೆಸೆಯುವ ಸಾಧನ. ಮದುವೆಯಾಗಬಯಸುವ ಯುವಕ ಯುವತಿಯರ ಪ್ರೀತಿಯನ್ನು ಗಟ್ಟಿಗೊಳಿಸುವ, ಬಿಡಿಸಲಾಗದ ಅನುಬಂಧವನ್ನು ನಿರೂಪಿಸುವ ಗುಣಗಳನ್ನು ಹೊಂದಿದೆ. ಪ್ಲಾಟಿನಂ ಲವ್ ಬ್ಯಾಂಡ್‌ಗಳು ಮಧುರವಾದ ನೆನಪುಗಳು ಮರುಕಳಿಸಲು ಸಹಕಾರಿ' ಎನ್ನುತ್ತಾರೆ ಪ್ಲಾಟಿನಂ ಆಭರಣಪ್ರಿಯೆ ಬೆಂಗಳೂರಿನ ಶುಭದಾ ಸತ್ಯನಾರಾಯಣ.

ಬೆಂಗಳೂರಿನಲ್ಲಿ ಆಭರಣ ಮಳಿಗೆಗಳಾದ ಕೃಷ್ಣಯ್ಯ ಚೆಟ್ಟಿ ಜ್ಯುವೆಲ್ಲರ್ಸ್, ಕೃಷ್ಣ ಡೈಮಂಡ್ ಜ್ಯುವೆಲ್ಲರಿ, ನಿಖಾರ್ ಜ್ಯುವೆಲ್ಲರಿ, ಆಭರಣ ಜ್ಯುವೆಲ್ಲರಿ, ಜೋಯಾಲುಕ್ಕಾಸ್, ಮಲಬಾರ್ ಗೋಲ್ಡ್, ಓರ್‍ರಾ ಆಭರಣ ಮಳಿಗೆಗಳಲ್ಲಿ ಪ್ಲಾಟಿನಂನ ವೈವಿಧ್ಯಮಯ ಆಭರಣ ಸಿಗುತ್ತದೆ. ಭಾರತದಲ್ಲಿ ಪ್ಲಾಟಿನಂ ನಿಕ್ಷೇಪಗಳಿಲ್ಲ. ಈ ಲೋಹದ ಗಣಿಗಳು ದಕ್ಷಿಣ ಆಫ್ರಿಕಾ ಮತ್ತು ರಷ್ಯಾಗಳಲ್ಲಿವೆ. ಅಲ್ಲಿಂದ ಪ್ಲಾಟಿನಂ ಅನ್ನು ಆಮದು ಮಾಡಿಕೊಂಡು ಭಾರತದಲ್ಲಿ ಆಭರಣ ತಯಾರಿಸಲಾಗುತ್ತದೆ. ಮುಂಬೈ, ಉದಯಪುರ, ಚೆನ್ನೈಗಳಲ್ಲಿ ಕೈಕುಸುರಿಯಿಂದ ಪ್ಲಾಟಿನಂ ಆಭರಣ ತಯಾರಿಸುವ ಕುಶಲಕರ್ಮಿಗಳಿದ್ದಾರೆ. ಭಾರತದಾದ್ಯಂತ ಸುಮಾರು 800ಕ್ಕೂ ಹೆಚ್ಚು ಆಭರಣ ಮಳಿಗೆಗಳಲ್ಲಿ ಪ್ಲಾಟಿನಂ ಆಭರಣ ಲಭ್ಯ. ಪ್ಲಾಟಿನಂ ಆಭರಣದಲ್ಲಿ ಬಹುತೇಕ ಸಿಂಪಲ್ ಡಿಸೈನ್‌ಗಳಿವೆ. ಒಡವೆ ಹಗುರವಾಗಿದ್ದು, ಎಲಿಗೆಂಟ್ ಲುಕ್ ಕೊಡುತ್ತದೆ. ಭಾರತೀಯ ಫ್ಯಾಷನ್ ಜತೆಗೆ ಪಾಶ್ಚಾತ್ಯ ಫ್ಯಾಷನ್ ಆಭರಣಗಳ ವಿನ್ಯಾಸಗಳನ್ನು ಮಿಶ್ರಣ ಮಾಡಿ ಆಭರಣ ತಯಾರಿಸುವುದರಿಂದ ಇದು ಚಿನ್ನ, ಬೆಳ್ಳಿ, ವಜ್ರ ಸೇರಿದಂತೆ ಬೇರೆಲ್ಲ ಲೋಹಗಳ ಆಭರಣಗಳಿಗಿಂತ ವಿಭಿನ್ನವಾಗಿ ನಿಲ್ಲುತ್ತದೆ.

'ವ್ಯಾಲಂಟೇನ್ಸ್ ಡೇ'ಗೆ ಪ್ಲಾಟಿನಂ ಲವ್‌ಬ್ಯಾಂಡ್, ಮದುವೆ ನಿಶ್ಚಿತಾರ್ಥಕ್ಕೆ ಉಂಗುರಗಳು, ಪ್ರೀತಿ ಪಾತ್ರರಿಗೆ ಉಡುಗೊರೆ ಕೊಡಲು ಬ್ರೇಸ್‌ಲೆಟ್, ಪಾರ್ಟಿವೇರ್‌ಗೆ ಸಿಂಪಲ್ ಡಿಸೈನ್ ಚೈನ್ ಮತ್ತು ನೆಕ್ಲೆಸ್‌ಗಳು... ಇವೆಲ್ಲ ಇಂದಿನ ಹೊಸ ಟ್ರೆಂಡ್. ಈ ಆಭರಣ ದಿನನಿತ್ಯ ಬಳಕೆಗೂ ಯೋಗ್ಯವಾಗಿರುವುದರಿಂದ ಕಾಲೇಜು ಯುವತಿಯರು, ಕಚೇರಿಗಳಿಗೆ ಹೋಗುವ ಉದ್ಯೋಗಸ್ಥ ಮಹಿಳೆಯರು ಹೆಚ್ಚು ಇಷ್ಟಪಡುತ್ತಿದ್ದಾರೆ.

ಪ್ಲಾಟಿನಂ ಉಂಗುರ 20 ಸಾವಿರ ರೂಪಾಯಿಗೆ ಸಿಗುತ್ತದೆ. ನೆಕ್ಲೆಸ್, ಸರ 10 ಲಕ್ಷ ರೂಪಾಯಿವರೆಗೂ ಬೆಲೆ ಬಾಳುತ್ತದೆ. ಮದುವೆ ಸೀಸನ್‌ನಲ್ಲಿ ಹೆಚ್ಚು ಸೇಲ್ ಆಗುತ್ತದೆ. ಆದರೂ ವರ್ಷದ ಎಲ್ಲ ದಿನಗಳಲ್ಲೂ ಪ್ಲಾಟಿನಂ ಆಭರಣ ಖರೀದಿಸುತ್ತಾರೆ. ಪ್ಲಾಟಿನಂ ಬೆಲೆ ಚಿನ್ನಕ್ಕಿಂತಲೂ ದುಬಾರಿ. ಪ್ಲಾಟಿನಂ ಆಭರಣದ ಮೇಲೆ 'ಪಿಟಿ 950' ಎಂಬ ಮಾರ್ಕ್ ಇರುತ್ತದೆ. ಇದು ಆಭರಣದ ಹಾಲ್‌ಮಾರ್ಕ್ ಆಗಿದ್ದು ಗುಣಮಟ್ಟ ಮತ್ತು ಪರಿಶುದ್ಧತೆಯ ಸಂಕೇತವೂ ಆಗಿದೆ. ಈ ಚಿಹ್ನೆ ಇದ್ದರೆ ಮಾತ್ರ ಪ್ಲಾಟಿನಂ ಆಭರಣ ಖರೀದಿಸಬೇಕು. ಇದು ಪ್ಲಾಟಿನಂ ಗಿಲ್ಡ್ ಆಫ್ ಇಂಡಿಯಾದಿಂದ ದೃಢೀಕರಣಗೊಂಡಿದೆ.

## ಸುದೀರ್ಘ ಇತಿಹಾಸ

ಪ್ಲಾಟಿನಂಗೆ ಸುದೀರ್ಘ ಇತಿಹಾಸವಿದೆ. ಪ್ಲಾಟಿನ ಎಂಬ ಸ್ಪಾನಿಷ್ ಶಬ್ದದಿಂದ ಪ್ಲಾಟಿನಂ ಬಂದಿದೆ. ಸ್ಪೇನ್‌ನ ಗಣಿತ ಶಾಸ್ತ್ರಜ್ಞ ಆ್ಯಂಟೋನಿಯೊಮ ಡಿ ಉಲ್ಲಾ ಪ್ಲಾಟಿನಂ ಅನ್ನು ಮೊತ್ತ ಮೊದಲ ಬಾರಿಗೆ 1735ರಲ್ಲಿ ಕಂಡುಹಿಡಿದ. ಸುಮಾರು ಎಂಟು ವರ್ಷಗಳ ಕಾಲ ನಡೆಸಿದ ಸಂಶೋಧನೆಯ ಬಳಿಕ ಇದನ್ನು ಅಮೂಲ್ಯ ಲೋಹ ಎಂದು ಪರಿಗಣಿಸಿದ. ಅದಾಗಿ 1741ರಲ್ಲಿ ಇಂಗ್ಲೆಂಡ್‌ನ ಲೋಹ ತಜ್ಞ ಚಾರ್ಲ್ಸ್ ವುಡ್ ಇದು ಅತ್ಯಂತ ಅಮೂಲ್ಯ ಲೋಹ ಎಂಬುದನ್ನು ಸಾಬೀತುಪಡಿಸಿದ.

ಪ್ಲಾಟಿನಂ ಆಭರಣ ದಿಢೀರ್ ಎಂದು ಅವತರಿಸಿದ ಒಡವೆಯಲ್ಲ. 1840ರಲ್ಲಿ ಪಟಿಯಾಲದ ಮಹಾರಾಜ ಪ್ಲಾಟಿನಂ ಮತ್ತು ವಜ್ರದ ಹರಳು ಇರುವ ನೆಕ್ಲೆಸ್ ಧರಿಸಿದ್ದ ಎನ್ನುತ್ತದೆ ಇತಿಹಾಸ. ಭಾರತಕ್ಕೆ ಪ್ಲಾಟಿನಂ ಲೋಹವನ್ನು ದಕ್ಷಿಣ ಆಫ್ರಿಕಾದಿಂದ ಆಮದು ಮಾಡಿಕೊಳ್ಳಲಾಗುತ್ತದೆ. ಶೇ 80ರಷ್ಟು ಪ್ಲಾಟಿನಂ ರಷ್ಯಾ ಮತ್ತು ದಕ್ಷಿಣ ಆಫ್ರಿಕಾದಿಂದಲೇ ಬರುತ್ತದೆ. ಪ್ರಾಚೀನ ಕಾಲದಲ್ಲಿ ಈಜಿಪ್ಟ್‌ನವರು ಪ್ಲಾಟಿನಂ ಆಭರಣ ಬಳಸುತ್ತಿದ್ದರು. ಫ್ರಾನ್ಸ್‌ನ ದೊರೆ ಲೂಯಿಸ್ 16 ಪ್ಲಾಟಿನಂ ಒಡವೆ ಧರಿಸಿಕೊಳ್ಳುತ್ತಿದ್ದ. ಈ ಲೋಹವನ್ನು ಮೊದಲಿಗೆ ಸ್ಪೇನ್ ಮತ್ತು ಕೊಲಂಬಿಯಾದವರು ಬಳಸಿದ್ದರು. ದಕ್ಷಿಣ ಅಮೆರಿಕದವರು ಸಹ ಬಳಸಿದ್ದರು.





### ಪ್ಲಾಟಿನಂ ಒಡವೆ; ಕೆಲವು ಟಿಪ್ಸ್

- ಪ್ಲಾಟಿನಂ ಆಭರಣ ಕೊಳ್ಳುವಾಗ ಪ್ರತಿ ಒಡವೆ ಮೇಲೆಯೂ ಪಿಟಿ950 ಎಂಬ ಮಾರ್ಕ್ ಇರುತ್ತದೆ. ಇದು ಶುದ್ಧತೆಯ ಸಂಕೇತ. ಈ ಮಾರ್ಕ್ ಇದ್ದರೆ ಮಾತ್ರ ಖರೀದಿಸಿ.
- ಪ್ಲಾಟಿನಂ ಆಭರಣವನ್ನು ಬಳಸಿದ ಮೇಲೆ ಹತ್ತಿಯಿಂದ ಅಥವಾ ಬಟ್ಟೆಯಿಂದ ಒರೆಸಿ ಇಡಬೇಕು. ಒಡವೆ ಬೆವರು, ದೂಳಿನಿಂದ ಮುಕ್ತವಾಗಿರಬೇಕು.
- ಪ್ಲಾಟಿನಂ ಒಡವೆಗಳ ಜತೆಗೆ ಬೇರೆ ಯಾವುದೇ ಆಭರಣವನ್ನು ಸೇರಿಸಿ ಇಡಬಾರದು.
- ಪ್ಲಾಟಿನಂ ಒಡವೆಗಳನ್ನು ಪ್ರತ್ಯೇಕವಾದ ಬಾಕ್ಸ್‌ನಲ್ಲೇ ಇಡಬೇಕು.